ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ ಮೂಡಬಿದಿರೆ

ಸಿಸಿ ನಂ.201/2018 ,

ಚಾಸಾ-6, ಪ್ರಾಸಾ -3

| | |
|---|---|
| ಹೆಸರು | ಅಕ್ರಂ ಶೇಖ್ |
| ತಂದೆಯ ಹೆಸರು | ಅಸ್ಮಾಬುದ್ದೀನ್ |
| ವಯಸ್ಸು | 47 ವರ್ಷ |
| ಕೆಲಸ | ವ್ಯಾಪಾರ |
| ವಾಸ | ಮೂಡಬಿದ್ರೆ , ಪ್ರಾಂತ್ಯ |
| ಪ್ರಮಾಣೀಕರಿಸಿದ ದಿನಾಂಕ | 06-12-2022 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಸಾಕ್ಷಿ ನಿಪಿ-2 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು. ಅದನ್ನು ದಿಃ 25-09-2017 ರಂದು ಲಾಡಿ , ಹೊಸಮನೆಯಲ್ಲಿ ಹಾಕಿರುತ್ತೇನೆ . ಸದರಿ ಸಮಯದಲ್ಲಿ ಪೊಲೀಸರು ಇದ್ದರು , ಬೇರೆ ಯಾರು ಇದ್ದರು ಎಂದು ಈಗ ನೆನಪಿಲ್ಲ . ಕಳ್ಳತನದ ವಿಚಾರದ ಸಲುವಾಗಿ ಪೊಲೀಸರು ಬಂದು ಸಂಜೆ 6-30 ರಿಂದ 7-30 ರವರೆಗೆ ಮಾಡಿದ ಮಹಜರ್ ಗೆ ನಾನು ಸ್ಥಳದಲ್ಲಿ ಇದ್ದು , ಸಹಿ ಮಾಡಿರುತ್ತೇನೆ. ಸದರಿ ಸಮಯದಲ್ಲಿ ಪೊಲೀಸರು ಈಗ ನ್ಯಾಯಾಲಯದ ಮುಂದೆ ನೋಡುತ್ತಿರುವ ಕತ್ತಿಯನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಕತ್ತಿಯನ್ನು ಈಗಾಗಲೇ ಮು.ಮಾ-1 ಎಂದು ಗುರುತಿಸಲಾಗಿದೆ .

2. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ , ಅದು ಸ್ವತ್ತು ಸ್ವಾಧೀನ ಮಹಜರ್ ಆಗಿದ್ದು , ಅದರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡ ಮೇರೆಗೆ ಅದನ್ನು ನಿಪಿ-4 ಎಂದು , ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ದಿಃ 18-11-2017 ರಂದು ಆರೋಪಿಯ ತಂದೆಯಾದ ಜಯರಾಂ ಕುಮಾರ್ ರವರ ಮನೆಯಲ್ಲಿ ಮಾಡಿರುತ್ತಾರೆ. ಆ ಸಮಯದಲ್ಲಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ , ನಾನು ಮತ್ತು ಪೊಲೀಸರು ಹಾಜರಿದ್ದೆವು . ನಮ್ಮ ಸಮಕ್ಷಮ ಸದರಿ ಮಹಜರನ್ನು ಮಾಡಿರುತ್ತಾರೆ. ಬೇರೆ ಯಾರು ಇದ್ದರು ಎಂದು ನನಗೆ ನೆನಪಿಲ್ಲ . ಸದರಿ ಮಹಜರನ್ನು ಮಧ್ಯಾಹ್ನ 12-30 ರಿಂದ 1-30 ರವರೆಗೆ ಮಾಡಿರುತ್ತಾರೆ.

3. ಸದರಿ ಸಮಯದಲ್ಲಿ ಬಂಗಾರದ ಒಡವೆಗಳನ್ನು ಆರೋಪಿಯು ಪೊಲೀಸರಿಗೆ ನೀಡಿರುತ್ತಾರೆ. ಅದು ಯಾವ ಒಡವೆಗಳು ಮತ್ತು ಎಷ್ಟು ಇದ್ದವು ಎಂದು ನನಗೆ ನೆನಪಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

1. ನಿಪಿ-2 ನ್ನು ಚಾಸಾ-1 ರವರು ತೋರಿಸಿಕೊಟ್ಟ ಮೇರೆಗೆ ನನ್ನ ಮತ್ತು ಚಾಸಾ-7 ರವರ ಸಮಕ್ಷಮ ಮಾಡಿರುತ್ತಾರೆ ಎಂದರೆ ನನಗೆ ಈಗ ನೆನಪಿಲ್ಲ. ಸದರಿ ಮಹಜರನ್ನು 18-00 ರಿಂದ 19-00 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿ . ಆ ಸಮಯದಲ್ಲಿ ಕರಡು ನಕ್ಷೆಯನ್ನೂ ಸಹ ಮಾಡಿರುತ್ತಾರೆ ಎಂದರೆ ಸರಿ.

2. ದಿಃ 18-11-2011 ರಂದು ಮಾಡಿದ ನಿಪಿ-4 ರ ಮಹಜರಿನಲ್ಲಿ ಒಟ್ಟು 12 ಐಟಂ ಸ್ವತ್ತುಗಳಾದ

1. ಬಂಗಾರದ ಸುಮಾರು 7 ಗ್ರಾಂ ನ ಬಂಗಾರದ ಜೋಮಾಲೆ
2. ಸುಮಾರು 4.380 ಗ್ರಾಂ ತೂಕದ ಬಂಗಾರದ ಚೈನ್ ಒಂದು ,
3. 4.200 ಗ್ರಾಂ ನ ಹೆಂಗಸರ ಬಂಗಾರದ ಉಂಗುರ,
4. 16.620 ಗ್ರಾಂ ನ ಬಂಗಾರದ ಬಳೆಗಳು ,
5. 8.08 ಗ್ರಾಂ ನ ಗಂಡಸರ ಬಂಗಾರದ ಉಂಗುರ
6. 10-430 ಗ್ರಾಂನ ಬಂಗಾರದ ಚೈನ್ ,
7. 11.270 ಗ್ರಾಂ ಬಂಗಾರದ ಒಂದು ಎಳೆ ಕರಿಮಣಿ ಸರ
8. 14.700 ಗ್ರಾಂ ನ ಬಂಗಾರದ ಎರಡೆಳೆಯ ಕರಿಮಣಿ ಸರ
9. 8.160 ಗ್ರಾಂನ ನಾಲ್ಕು ಬಂಗಾರದ ಉಂಗುರಗಳು
10. 12-530 ಗ್ರಾಂ ನ ಬಂಗಾರದ ನೆಕ್ಲೇಸ್
11. 6.280 ಗ್ರಾಂನ ಬಂಗಾರದ ಸಣ್ಣ ನೆಕ್ಷಲೇಸ್
12. 12.280 ಗ್ರಾಂನ ಬಂಗಾರದ ಬಳೆ ಒಂದು ಜೊತೆ ಗಳನ್ನು ಆರೋಪಿಯು ವಿವಿದೆಡೆಗಳಲ್ಲಿ ಕಳ್ಳತನ ಮಾಡಿದ್ದನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿ .

3.ಅಲ್ಲದೆ ಆರೋಪಿ ಸ್ಯಾಮ್ ಸಂಗ್ ಮೊಬೈಲ್ ಗಳನ್ನು ಹಾಜರು ಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಮಯದಲ್ಲಿ ಚಾಸಾ-11 ರವರು ಹಾಜರಿದ್ದರು ಎಂದರೆ ನನಗೆ ಈಗ ನೆನಪಿಲ್ಲ. ಅದೇ ದಿನ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

1. ನಿಪಿ-2 ಕ್ಕೆ ಚಾಸಾ-11 ರವರು ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ಅವರು ಸದರಿ ಸಮಯದಲ್ಲಿ ಹಾಜರಿದ್ದರು. ಮು.ಮಾ-1 ನ್ನು ಚಾಸಾ-1 ರವರು ಪೊಲೀಸರಿಗೆ ನೀಡಿರುತ್ತಾರೆ. ಮು.ಮಾ-1 ಅಡಿಗೆ ಮನೆಯಲ್ಲಿ ಇತ್ತು ಅದನ್ನು ಚಾಸಾ-1 ರವರು ಪೊಲೀಸರಿಗೆ ನೀಡಿರುತ್ತಾರೆ, ಚಾಸಾ-1 ನನ್ನ ಆತ್ಮೀಯ ಸ್ನೇಹಿತರು . ತಕ್ಷೀರು ಸ್ಥಳಕ್ಕೆ ಬಂದ ಪೊಲೀಸರು ಕಳುವಾದ ವಸ್ತುಗಳು ಸಿಕ್ಕಿದ ನಂತರ ನಿಮಗೆ ಹಾಗೂ ಚಾಸಾ-1 ರವರಿಗೆ ಕರೆ ಮಾಡುತ್ತೇವೆ , ಆಗ ಠಾಣೆಗೆ ಬನ್ನಿ ಎಂದು ತಿಳಿಸಿರುತ್ತಾರೆ.

2. ಅದೇ ರೀತಿ ದಿಃ 18-11-2017 ರಂದು ಪೊಲೀಸರು ಕಳ್ಳತನವಾದ ವಸ್ತುಗಳು ಸಿಕ್ಕಿವೆ ಸಹಿ ಮಾಡಲು ಠಾಣೆಗೆ ಬನ್ನಿ ಎಂದು ತಿಳಿಸಿದ ಮೇರೆಗೆ ನೀವು ಮತ್ತು ಚಾಸಾ-1 ರವರು ಹೋಗಿರುತ್ತೀರಾ ಎಂದರೆ ನಾನು ಹೋಗಿರುವುದಿಲ್ಲ. ಚಾಸಾ-1 ರವರು ಹೋಗಿರುತ್ತಾರೆ. ಚಾಸಾ-1 ರವರು ಅವರ ಸ್ವತ್ತುಗಳು ಸಿಕ್ಕಿವೆ ಎಂದು ನನಗೆ ತಿಳಿಸಿರುತ್ತಾರೆ. ಚಾಸಾ-1 ರವರು ನನಗೆ ಮಹಜರ್ ಗೆ ಸಹಿ ಮಾಡಲು ಕರೆದಿರುವುದಿಲ್ಲ, ಪೊಲೀಸರು ಕರೆದಿರುತ್ತಾರೆ. ಚಾಸಾ-1 ರವರು ಎಲ್ಲಾ ಸ್ವತ್ತುಗಳು ನನಗೆ ಸಿಕ್ಕಿವೆ ಎಂದು ಹೇಳಿದ ನಂತರ ಪೊಲೀಸರು ನನ್ನನ್ನು ಠಾಣೆಗೆ ಕರೆದಿರುತ್ತಾರೆ. ಆಗ ನಾನು ಹೋಗಿರುತ್ತೇನೆ . ನಾನು ಹೋದಾಗ ಠಾಣೆಯಲ್ಲಿ ಚಾಸಾ-1 ರವರು ಇದ್ದರು . ಕಳ್ಳತನವಾದ ಸ್ವತ್ತುಗಳನ್ನು ಠಾಣೆಯಲ್ಲಿ ನಾನು ನೋಡಿರುವುದಿಲ್ಲ , ಚಾಸಾ-1 ರವರಿಗೆ ತೋರಿಸಿರುತ್ತಾರೆ. ಕಳ್ಳತನವಾದ ಚಿನ್ನದ ಆಭರಣಗಳನ್ನು ಹಾಗೂ ಮೊಬೈಲ್ ಗಳನ್ನು ನಾನು ನೋಡಿರುವುದಿಲ್ಲ.

3 . ಆ ನಂತರ ಪೊಲೀಸರು ಠಾಣೆಯಲ್ಲಿ ಕಳ್ಳತನವಾದ ಸ್ವತ್ತುಗಳು ಚಾಸಾ-1 ರವರಿಗೆ ಸಿಕ್ಕಿರುತ್ತದೆ ಎನ್ನುವ ಬಗ್ಗೆ ಟೈಪ್ ಮಾಡಿರುತ್ತಾರೆ , ಹಾಗೂ ಅದಕ್ಕೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಸಹಿಯು ನಿಪಿ-4 ರಲ್ಲಿ ಇರುವ ಸಹಿಯಾಗಿರುತ್ತದೆ. ಸದರಿ ಸಹಿಯನ್ನು ಹಾಕುವಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ . ಸಹಿ ಮಾಡಿದ ನಂತರ ನಾನು ಮನೆಗೆ ಬಂದಿರುತ್ತೇನೆ. ಇಷ್ಟಲ್ಲದೆ ಈ ಪ್ರಕರಣದಲ್ಲಿ ಬೇರೇನೂ ನನಗೆ ಗೊತ್ತಿಲ್ಲ.

6. ನಾನು ಪೊಲೀಸರಿಗೆ ಚಾಸಾ-1 ರವರಿಗೆ ಬಂಗಾರವನ್ನು ನೀಡಿರುವುದರ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ-1 ರವರು ನನ್ನ ಸ್ನೇಹಿತನಾದ್ದರಿಂದ , ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ . ಸದರಿ ಸಮಯದಲ್ಲಿ ಮು.ಮಾ-1 ನ್ನು ಸ್ವಾಧೀನ ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾ ಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ